# ಶ್ರೀರಾಮದಾಸರು

❑ ಕೆ.ಆರ್. ರಾಮಚಂದ್ರರಾಜು

ಭಾರತೀಯ ಧಾರ್ಮಿಕ ಕ್ಷೇತ್ರ ಅತ್ಯಂತ ಫಲವತ್ತಾಗಿದ್ದು ಅನೇಕಾನೇಕ ಸಂತಶ್ರೇಷ್ಠರು ಇಲ್ಲಿ ಜನಿಸಿದ್ದಾರೆ. ಅಷ್ಟೊಂದು ಪರಿಚಿತರಲ್ಲದ ಸಂತರೊಬ್ಬರನ್ನು ಪರಿಚಯಿಸಿಕೊಡುತ್ತಿರುವ ಶ್ರೀರಾಮಚಂದ್ರ ರಾಜು ಅವರು ಬೆಂಗಳೂರಿನವರು.

ಭಗವಂತನ ದೃಷ್ಟಿಯಲ್ಲಿ ಜಾತಿ, ಮತಭೇದವಿಲ್ಲವೆಂಬುದಕ್ಕೆ ೧೮ನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ಶ್ರೀರಾಮ ದಾಸರೆಂಬ ದಾಸವರೇಣ್ಯರ, ಶ್ರೀರಾಮನ ಅನನ್ಯ ಭಕ್ತರ ಜೀವನ ವೃತ್ತಾಂತ್ತವೇ ಒಂದು ಉದಾಹರಣೆ.

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಜೋಳ ದಡಗು ಗ್ರಾಮವು ಬಡೇ ಸಾಹೇಬರ ಜನ್ಮಸ್ಥಳ. ತಂದೆ ಖಾಜಾ ಸಾಹೇಬರು, ತಾಯಿ ಪೀರಮ್ಮ. ಪಿಂಜಾರ ಪಂಗಡಕ್ಕೆ ಸೇರಿದವರು. ಜನ್ಮತಃ ಮಹಮದೀಯರು. ಬಡತನದ ಬೇಗೆಯಲ್ಲೇ ಕಾಲ ಕಳೆದರೂ ಕನ್ನಡವನ್ನು ಓದಲು ಬರೆಯಲು ಚೆನ್ನಾಗಿ ಅಭ್ಯಾಸ ಮಾಡಿದ್ದರು. ಬಡತನದಿಂದ ವಿದ್ಯಾಭ್ಯಾಸವನ್ನು ಮುಂದುವರಿಸ ಲಾಗದೆ ಉದರಪೋಷಣೆಗಾಗಿ ಅದೇ ಊರಿನ ಅಂಗಡಿಯಲ್ಲಿ ಕೂಲಿ ಕೆಲಸಕ್ಕೆ ಸೇರಿಕೊಂಡರು. ಸ್ವಲ್ಪಕಾಲದ ನಂತರ ಮಾನ್ವಿ ತಾಲ್ಲೂಕು ಹಣಗಿ ಗ್ರಾಮದಲ್ಲಿ ಖಾಸಗಿ ಶಿಕ್ಷಕರಾಗಿ ಕೆಲಸ ಮಾಡತೊಡಗಿದರು. ದೇವದುರ್ಗದ ಹುಸೇನಮ್ಮ ಎಂಬುವ ರೊಂದಿಗೆ ವಿವಾಹವಾಯಿತು.

ರಾಯಚೂರಿನಲ್ಲಿ ಸಾಧುಗಳ ಸತ್ಸಂಗದ ಪರಿಣಾಮವಾಗಿ ಅವರೊಂದಿಗೆ ಹಂಪೆಗೆ ಹೋದರು. ಅಲ್ಲಿ ಶ್ರೀರಾಮಾವಧೂತರ ಪರಿಚಯವಾಗಿ ಅವರ ಸಾನ್ನಿಧ್ಯದಲ್ಲಿರುವಾಗ ಮನಸ್ಸು ಭಗವಂತನ ಚಿಂತನೆ ಹಾಗೂ ಆಧ್ಯಾತ್ಮಿಕತೆಯತ್ತ ಹರಿಯತೊಡಗಿತು. ಹೀಗೆ ವರ್ಷಗಳು ಕಳೆದನಂತರ ಮನೆಗೆ ಹೋಗಿಬರಲು ಶ್ರೀಗಳ ಅಪ್ಪಣೆ ಪಡೆದು, ಸ್ವಗ್ರಾಮಕ್ಕೆ ಹೋಗಿ ಹಿಂದಿರುಗಿ ಬಂದಾಗ ಅವಧೂತರು ಹಂಪೆಯಿಂದ ನಿರ್ಗಮಿಸಿದ್ದರು. ಅವರ ಸಾನ್ನಿಧ್ಯ ದಿಂದ ವಂಚಿತರಾಗಿ ನಿರಾಶೆಯಿಂದ ಯಾದವಗಿರಿಗೆ ಹೋಗಿ ನೆಲೆಸಿದರು. ಕೆಲವು ಕಾಲ ಅಲ್ಲಿದ್ದು ಹೆಂಡತಿಯನ್ನು ತವರುಮನೆಗೆ ಕಳುಹಿಸಿ ಪುನಃ ಜೋಳದಡಗಿಗೆ ಬಂದರು.

ಕೆಲವು ವರ್ಷಗಳ ಅನಂತರ ಲಿಂಗದಹಳ್ಳಿಯ ಅಲ್ಲಮ್ಮನವರನ್ನು ಸಹಧರ್ಮಿಣಿಯಾಗಿ ಸ್ವೀಕರಿಸಿದರು. ಕೆಲವು ಕಾಲ ಅಲ್ಲೇ ವಾಸಿಸಿ ಅನಂತರ ಲಿಂಗಸೂಗೂರು ತಾಲ್ಲೂಕು ಗೊನವಾರ ಗ್ರಾಮಕ್ಕೆ ಬಂದು ಪುನಃ ಅಲ್ಲಿ ಶಿಕ್ಷಕ ವೃತ್ತಿಯನ್ನು ಮೂರು ವರ್ಷ ಕಾಲ ಮುಂದುವರೆಸಿದರು. ಅಲ್ಲಿದ್ದ ಕೀರ್ತನಕಾರರೂ ಹಾಗೂ ಪಂಡಿತರೂ ಆಗಿದ್ದ ವೆಂಕಟಭೀಮಾಚಾರ್ಯರು ಮತ್ತು ಹನು ಮಂತಾಚಾರ್ಯರ ಪರಿಚಯದ ಫಲವಾಗಿ ಸಾಹೇಬರಲ್ಲಿ ಸುಪ್ತ ವಾಗಿ ಅಡಗಿದ್ದ ಸಂಗೀತ ಮತ್ತು ಸಾಹಿತ್ಯ ಜ್ಞಾನಕ್ಕೆ ಇಂಬು ಕೊಟ್ಟಂತಾಯಿತು.

ಶಿಕ್ಷಕ ವೃತ್ತಿಗೆ ತಿಲಾಂಜಲಿ ನೀಡಿ ಮನಸ್ಸನ್ನು ದಾಸಸಾಹಿತ್ಯ ಅಧ್ಯಯನ, ಸಂಗೀತ, ಪುರಾಣ, ಪುಣ್ಯಕಥಾ ಶ್ರವಣ ಇತ್ಯಾದಿ ಗಳಲ್ಲಿ ತೊಡಗಿಸಿದರು. ಅಲ್ಲಿಯೇ ವಾಸಿಸಿದ್ದ ಪಟವಾರಿ ವಂಶಸ್ಥರಾದ ಶ್ರೀನಿವಾಸರಾಯರು ಬಡೇ ಸಾಹೇಬರ ನಿಷ್ಠೆ, ಸತ್‌ಚಾರಿತ್ರ್ಯ ಹಾಗೂ ಸಾತ್ವಿಕ ಜೀವನವನ್ನು ಕಂಡು ತಮ್ಮಲ್ಲಿಯೇ ಇರಲು ವಿನಂತಿಸಿಕೊಂಡರು. ಇದಕ್ಕೆ ಒಪ್ಪಿ ಸುಮಾರು ಹದಿಮೂರು ವರ್ಷಕಾಲ ಅವರ ಮನೆಯಲ್ಲಿಯೇ ವಾಸವಾಗಿದ್ದರು. ಅಂದಿನ ಕಾಲದಲ್ಲಿ ಜಾತಿ ಮತ ಭೇದಗಳು ಅಧಿಕವಾಗಿದ್ದರೂ ಸಹ ಒಬ್ಬ ಮುಸಲ್ಮಾನರನ್ನು ಮಡಿವಂತರ ಮನೆಯಲ್ಲಿ ವಾಸಮಾಡಲು ಅವಕಾಶ ಮಾಡಿಕೊಟ್ಟಿರುವುದನ್ನು ಗಮನಿಸಿದರೆ ಬಡೇ ಸಾಹೇಬ್ ಎಷ್ಟೊಂದು ಸದ್ಗುಣಿಗಳೂ ಭಗವದ್ಭಕ್ತರೂ ಆಗಿದ್ದರೆಂಬುದರ ಅರಿವಾಗುತ್ತದೆ.

ಬಡೇ ಸಾಹೇಬರು ಆಧ್ಯಾತ್ಮಿಕ ವಿಚಾರಗಳಲ್ಲಿ ಹಾಗೂ ಸಂಕೀರ್ತನೆಯಲ್ಲಿ ಕಾಲಕಳೆಯುತ್ತಿದ್ದಾಗ ಹರಿಪ್ರೇರಣೆ ಯಿಂದ 'ಶ್ರೀರಾಮ' ಅಂಕಿತದಲ್ಲಿ ಕೃತಿಗಳನ್ನು ರಚಿಸಲು ಪ್ರಾರಂಭ ಮಾಡಿದರು. ಒಟ್ಟು ಸುಮಾರು ೭೮೩ ಕೃತಿಗಳನ್ನು ರಚಿಸಿದ್ದಾರೆ. ಇವುಗಳ ಪೈಕಿ ೮ ಕೃತಿಗಳು ಮಿಶ್ರಭಾಷೆಯಲ್ಲಿವೆ (ದಖ್ಖೀ ಉರ್ದು). ೪೭೦ ನುಡಿಗಳಲ್ಲಿರುವ 'ಶ್ರೀರಾಮಭಜನೆ'ಯೇ ಎಲ್ಲಕ್ಕಿಂತ ದೊಡ್ಡದು. ಇದಲ್ಲದೆ ದಾಸರ ಪಂಚಶತಾಷ್ಟಕಗಳೂ ಉಗಾ ಭೋಗಗಳೂ ಇವೆ. ಈ ಕೃತಿಗಳನ್ನು ರಚಿಸಿ 'ರಾಮದಾಸ' ರೆಂದು ಖ್ಯಾತರಾದರು.

ಪಂಚವಿಧ ಭಾವಗಳ ಮೂಲಕ ಭಕ್ತಿಸಾಧನೆ ಮಾಡುವುದು ಹರಿದಾಸರಲ್ಲಿರುವ ಪದ್ಧತಿ. ಅದು ಹರಿದಾಸರಲ್ಲಿ ಅಗ್ರಗಣ್ಯರಾದ ಶ್ರೀಪಾದರಾಯರ ಕಾಲದಿಂದಲೂ ನಡೆದು ಬಂದಿದೆ. ರಾಮ ದಾಸರು ಸಹ ಈ ಸಂಪ್ರದಾಯವನ್ನೇ ಅನುಕರಿಸಿದ್ದಾರೆ. ಇವರ ಕೃತಿಗಳನ್ನು ೪ ಭಾಗಗಳನ್ನಾಗಿ ವಿಂಗಡಿಸಬಹುದು. (೧) ಭಕ್ತಿಪರ ವಾದ ಕೃತಿಗಳು (೨) ತತ್ತ್ವಪ್ರತಿಪಾದಕ ಕೃತಿಗಳು (೩) ಆತ್ಮ ಶೋಧನೆಯ ಕೃತಿಗಳು ಮತ್ತು (೪) ಸಾಮಾಜಿಕ ಕೃತಿಗಳು.

### ಕೃತಿಗಳ ಅವಲೋಕನ

**ಭಕ್ತಿಪರವಾದ ಕೃತಿಗಳು** : ದಾಸರು ಕನಸಿನಲ್ಲಿ ಕಂಡ ತಿರುಪತಿ ತಿಮ್ಮಪ್ಪನನ್ನು ಪರಿಪರಿಯಾಗಿ ಕೊಂಡಾಡಿದ್ದಾರೆ:

**ನೀಲಬಣ್ಣದೊಪ್ಪುವ ಸುಂದರ ಶುಭಕಾಯ**
**ಇಂದಿರೆಲೋಲ ತ್ರಿಜಗ ಮೋಹನಕಾರ ಕೊರಳ ಪದಕ**
**ಮಾಲ, ಕೌಸ್ತುಭ ಮಕುಟಮಣಿಹಾರ ರತ್ನದುಂಗುರ**

ಕಾಲಲ್ಹೊಳೆಯುವ ಗೆಜ್ಜೆ ಸರಪಳಿ
ಶೀಲವೈಷ್ಣವ ಪಣೆಯಲಿ" (ಕೀ.೨೬)

ಇನ್ನೊಂದು ಕೃತಿಯಲ್ಲಿ ತಮಗಾದ ದಿವ್ಯದರ್ಶನವನ್ನು ಕುರಿತು ಬಣ್ಣಿಸಿದ್ದಾರೆ :

"ಮನದಣಿ ನೋಡಿದೆನೋ ಏನೆಂದು ಬಣ್ಣಿಸಲಿ
ನಮ್ಮಯ್ಯನ ಆನಂದದ ಕೀಲಿ ತಾನೆ ಒಲಿದಿತ್ತೆನಗೆ
ಮುಕ್ತಿ ಎನಗೆ ಒಡಿತವ್ವ ಹರಿ ಭಕ್ತರ ಮನಿಯನ ದೆವ್ವ
ಶ್ರೀರಾಮನ ಪಾದ ಸೇರಿ ಸಾನಂದ ಪದವೇರಿಸಿತವ್ವಾ..."
(ಕೀ.೫೩೩)

೪೬೦ ನುಡಿಗಳಲ್ಲಿರುವ 'ಶ್ರೀರಾಮಭಜನೆ'ಯೇ ಎಲ್ಲಕ್ಕಿಂತ ದೊಡ್ಡದು. ಉದಾ :

"ಹಿಂದಕಾದದ್ದಾಯ್ತು ಮುಂದೆ ಎನ್ನಯ ಬವಣೆ
ಚಂದಾಗಿ ತಿದ್ದಯ್ಯ ತಂದೆ ಶ್ರೀರಾಮ.... (ಕೀ.೪೭೮)
"ಹಿಂದಾರು ಎನಗಿಲ್ಲ ಮುಂದಾರು ಗತಿಯಿಲ್ಲ,
ತಂದೆ ನೀ ಬಿಟ್ಟರೆ
ಬಂಧ ಕಳೆಯುವರಿಲ್ಲ, ನೀನೆ ಗತಿ ಎನಗಿನ್ನು ಕಾಣೆ
ಮತ್ತಾರನ್ನೂ ಮಾಣದೆ ಸಲಹಯ್ಯ ಪ್ರಾಣೇಶ ಶ್ರೀರಾಮ...
(ಕೀ. ೧೫೧)

"ಮರಣವಾದರು ಕೊಡು ಮರಿಯಾದೆ ಕಳೀಬೇಡ" (ಕೀ. ೭೩೯) ಎಂಬುದೇ ಶ್ರೀರಾಮನಲ್ಲಿ ದಾಸರ ಮೊರೆ.

**ತತ್ತ್ವಪ್ರತಿಪಾದಕ ಕೃತಿಗಳು** : ಈ ಕೃತಿಗಳಲ್ಲಿ ದಾಸರು ಮಧ್ವಮತ ತತ್ತ್ವಗಳನ್ನು ಪ್ರತಿಪಾದಿಸಿದ್ದಾರೆ. ಉದಾ :

ಎಲ್ಲಿ ಕರೆದರಲ್ಲಿ ಬರುವ ಸೊಲ್ಲು ಸೊಲ್ಲಿನೊಳಗೇ
ನಿಂತಿರುವ ಸರ್ವಾಂತರ್ಯಾಮಿ ಸರ್ವೇಶ, ನೀನಿಲ್ಲದ
ಜಗವಿನಿತಿಲ್ಲ....(ಕೀ.೫೬೩)
"ಸತ್ಯಸರ್ವೋತ್ತಮ ಹರಿಯೆಂದು ಆರ್ತಿಯಿಂ ಭಜಿಸಿ.. (ಕೀ.೬೫೧)
"ಸತ್ಯ ಚಿತ್ತಾನಂದ ಭಕ್ತಜನಬೆಂಬಲನೆ ಸತ್ಯಾತ್ಮ
ಸರ್ವೋತ್ತಮ...(ಕೀ.೬೫೨)
"ನಿನ್ನಿಂದ ಬೆಳಗುವುದು, ನಿನ್ನಿಂದ ಮುಳುಗುವುದು
ನಿನ್ನಿಂದಲಳಿಯುವುದು, ನಿನ್ನಿಂದಲುಳಿಯುವುದು,
ನಿನ್ನಿಂದ ಶಕ್ತರು, ನಿನ್ನಿಂದ ಮುಕ್ತರು, ನಿನ್ಹೊರತು
ಧನ್ಯರಾರೆನ್ನೊಳಿರ್ದು ಪೊರೆ ಶ್ರೀರಾಮ...." (ಕೀ.೩೪೨)

**ಆತ್ಮಶೋಧನೆಯ ಕೃತಿಗಳು:**

ಉದಾ : "ಈ ನೀಚ ಮನಸಿಗೆ ಮಾಡಲಿನ್ನೇನು ಥೂ
ನಾಚಿಕಿಲ್ಲದಕೆ....(ಕೀ.೬೦)
"ತಪ್ಪು ಮಾಡಿದ್ದು ಸತ್ಯ ನಾನಪ್ಪ ಎನ್ನ ಪೂರ್ವದ ಕರ್ಮ ಬೆನ್ನತ್ತಿ ಕಾಡುವಾಗ.....(ಕೀ.೨೩೭) ಎಂದು ತಮ್ಮನ್ನು ತಾವೇ ಸಂತೈಸಿಕೊಂಡಿದ್ದಾರೆ.

"ಮಂದಮತಿ ನಾನೊಂದೂ ಅರಿಯೆನು"(ಕೀ.೫೮೪) (ಉ)

"ನಿನ್ನ ಸೂತ್ರದಿ ಕುಣಿವ ಶಿಶು ನಾನು..." ಎಂದು ಸಲಿಗೆಯಿಂದ ಹರಿಯನ್ನು ಪರಿಪರಿಯಾಗಿ ಬೇಡುತ್ತಾರೆ. ಸುಮ್ಮನೆ ಪೊಗಳಿದರ್‍ಯಾಕೀತನ....(ಕೀ.೬೯೧) .

ದ್ರೌಪದಿಯ ಪ್ರಸಂಗವನ್ನು ನೆನೆಯುತ್ತಾ ಹೀಗೆನ್ನುತ್ತಾರೆ : "ದ್ರೌಪದಿಯನ್ನು ಪೊರೆದೆಯಲ್ಲಾ ಅವಳೇನು ವೈಕುಂಠಕ್ಕೆ ಕಾರುಕೊಟ್ಟಿದ್ದಳೆ?" ಎಂದು ಮೂದಲಿಕೆಯಿಂದಾಡುವ ದಾಸರ ಆಡುಮಾತಿನ ಶೈಲಿ ಬಾಯಿ ಚಪ್ಪರಿಸುವಂತಿದೆ (ಕೀ.೭೬೬). ಶ್ರೀಹರಿಯ ಮೇಲಿನ ಮುನಿಸು, ಜೋರು ಎಲ್ಲ ದಾಸರ ಪ್ರಕ್ಷುಬ್ಧ ಮನಸ್ಸಿನ ಪ್ರತಿಕ್ರಿಯೆಗಳಷ್ಟೆ.

**ಸಾಮಾಜಿಕ ಹಾಗೂ ಉಪದೇಶಾತ್ಮಕ ಕೃತಿಗಳು** :

"ಸಾಧಿಸಿ ಪಡೆದಿದ್ದಿ ನರಜನುಮ,
ಸಂಪಾದಿಸಿಕೊಳ್ಳಲೆ ಹರಿನಾಮ,
ಪೋದ ಬಳಿಕ ಇಂಥಾ ಮಹಾಜನುಮ,
ಮತ್ತೆ ಸಾಧನಸಾಧ್ಯವಲ್ಲೆಲೋ ತಮ್ಮ."(ಕೀ.೬೬೭)

"ಹೊಲಸು ಕಿಲ್ಬಿಷ ಮಾಂಸ ಮೇಲೆ, ಚರ್ಮದ ಹೊದಿಕೆ ಬಲವಾಗಿ.
ಬಿಗಿದ ನರ ಎಲುವಿನ್ಹಂದರವು, ತೊಳೆಯದಿರ್ದರೆ ನಿಮಿಷ
ಹೊಲಸು ನಾರುವ ಮಹಮಲಭಾಂಡಕ್ಕೊಲಿದು ಬಲು
ಸಿಲುಕಿ ಬಂಧದೊಳು...."(ಕೀ.೫೯೭)

"ಯೋಗಿಯಾಗಲೆ ಇಲ್ಲ ತ್ಯಾಗಿಯಾಗಲೆ
ಹಾಗೂ ಹೀಗೂ ಆಗದೆ ಭವರೋಗಿಯೆನಿಸದಿರೆಲೊ ಗೂಗಿ...
ರಾಮನಾಮ ಭಜಿಸಿ ಮುಕ್ತನಾಗೆಲೊ....." (ಕೀ.೫೯೮)

"ಮಾಡಿ ಉಂಡರೆ ನೋಡಿ ಸಹಿಸರು,
ಬೇಡಿ ಉಂಡರೆ ಹೇಡಿಯೆಂಬವರು,
ಗಾಢ ಮುಕ್ತಿಪದ ಕೊಡುವ ಶ್ರೀರಾಮನ ಹಾಡಿ ಪಾಡಿದರೆ
ನಿಂದೆ ಮಾಡುವರು..."(ಕೀ.೬೧೦)

"ಹುಚ್ಚನಾಗಬೇಕೊ ಜಗದಿ ಹುಚ್ಚನಾಗಬೇಕೋ,
ಅಚ್ಚುತಾನಂತನ ನಿಶ್ಚಲ ಧ್ಯಾನದಿ ಇಚ್ಛೆಯಿಟ್ಟು
ಜಗದೆಚ್ಚರ ನೀಗಿ...."(ಕೀ.೭೪೬)

ತೋರಿಕೆಯ ಮಡಿ ಮಾಡುವರನ್ನು ಕಂಡ ದಾಸರು ಹೇಳುತ್ತಾರೆ :

"ಮಡಿ ಮಡಿಯೆಂದು ಹಾರ್‍ಯಾಡಿ,
ಮಡಿಯಬೇಡಿರೋ ಭವದುರಳ್ಯಾಡಿ,
ಜಡಮತಿ ಕಡಿದು ಬಿಡಲಾಸೆ ತೊಡೆದು, ನಡಿರೋ
ಸನ್ಮಾರ್ಗದದು ನಿಜಮಡಿ..."(ಕೀ.೫೮೯)

ಸನ್ಮಾರ್ಗದಲ್ಲಿ ನಡೆಯುವುದೇ ನಿಜವಾದ ಮಡಿ. ಕ್ಷುದ್ರ

ಬುದ್ಧಿಗಳನ್ನು ಬಿಟ್ಟು ಪರಿಶುದ್ಧನಾಗುವುದೇ ಒದ್ದಮಡಿ, ಮಡಿ ಮೈಲಿಗೆಗಳಿಲ್ಲದ ಒಡೆಯ ಶ್ರೀರಾಮನಡಿಯನ್ನು ನಂಬುವುದೇ ಮೂಲ ಮಡಿ. ಒದ್ದೆಬಟ್ಟೆಯುಟ್ಟು ಸದಾಚಾರಗಳನ್ನು ಬಿಟ್ಟರೆ ಅದು ಖಂಡಿತ ಮಡಿಯಲ್ಲವೆಂದು ದಾಸರು ಮನುಕುಲಕ್ಕೆ ಈ ರೀತಿಯಾಗಿ ಉಪದೇಶಿಸಿದ್ದಾರೆ.

ರಾಮದಾಸರು ತಮ್ಮ ಜೀವಿತ ಕಾಲದಲ್ಲಿ ಉಡುಪಿ, ತಿರುಪತಿ, ಪಂಡರಾಪುರ, ಶ್ರೀಶೈಲ, ಮುಂಡರಗಿ ಮುಂತಾದ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿ ಆಯಾಯ ಕ್ಷೇತ್ರಗಳನ್ನು ಕುರಿತು ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಕೃತಿಗಳಲ್ಲಿ ಪುರಂದರದಾಸರು, ಕನಕದಾಸರು, ಗೋಪಾಲದಾಸರು, ವಿಜಯದಾಸರು, ನಾಮದೇವ, ತುಕಾರಾಮ್ ಹಾಗೂ ಪುಂಡಲೀಕರನ್ನು ಸ್ಮರಿಸಿದ್ದಾರೆ. ಹರಿದಾಸ ಪರಂಪರೆಯಲ್ಲಿ ಶನಿದೇವರ ಸ್ತುತಿ ಅಪರೂಪ, ಆದರೆ ರಾಮದಾಸರು ಶನಿದೇವರನ್ನು ವಿಶೇಷವಾಗಿ ಸ್ತುತಿಸಿದ್ದಾರೆ.

ರಾಮದಾಸರು ಜಾತಿಯಲ್ಲಿ ಮುಸಲ್ಮಾನರಾದರೂ ಅವರು ಜೀವನದಲ್ಲಿ ಪ್ರಚಾರ ಮಾಡಿದ್ದು ಹಿಂದೂ ಧರ್ಮತತ್ತ್ವ.

**"ತಾಮಸವನು ತ್ಯಜಿಸಿ, ದಾಸರ ಪ್ರೇಮವನ್ನು ಬಯಸಿ, ಭೂಮಿಯೊಳು ಶ್ರೀರಾಮ, ರಹೀಮನೆಂದು ನೇಮಿಸಿಕೊಂಡ ನಿಸ್ಸೀಮ ಕುಲನಂದು"** ಎನ್ನುವ ಸಮನ್ವಯ ದೃಷ್ಟಿ ಅವರದು.

ಶ್ರೀರಾಮದಾಸರು ಎಷ್ಟು ವರ್ಷಕಾಲ ಬದುಕಿದ್ದರೆಂಬುವುದಕ್ಕೆ ಸರಿಯಾದ ಪುರಾವೆಗಳು ದೊರೆತಿಲ್ಲ. ಅವರ ಸಮಾಧಿಯು ದೇವದುರ್ಗ ತಾಲ್ಲೂಕಿನ ಲಿಂಗದಹಳ್ಳಿ ಗ್ರಾಮದ ಬಳಿ ಇದೆ. ಸಮಾಧಿಯ ಮೇಲೆ ಇಟ್ಟಿರುವ ಬಂಡೆಯ ಮೇಲೆ ಆಂಜನೇಯನ ಆಕೃತಿಯು ಒಡಮೂಡಿದ್ದು, ಮೂರ್ತಿಯು ಸ್ಪಷ್ಟವಾಗಿ ಕಾಣುತ್ತದೆ. ಇಷ್ಟೇ ಅಲ್ಲದೆ ಸಮಾಧಿಯ ಮೇಲೆ ತುಳಸಿ ಗಿಡಗಳು ಸ್ವತಃ ಬೆಳೆದಿರುವುದು ಒಂದು ವಿಶೇಷ. ಇದೆಲ್ಲಾ ಅವರ ಭಕ್ತಿಯ ಪ್ರತೀಕವೆಂಬುವದರಲ್ಲಿ ಸಂಶಯವೇ ಇಲ್ಲ. ಈಗಲೂ ಮಾರ್ಗಶಿರ ಬಹುಳ ದಶಮಿಯಂದು ಶ್ರೀರಾಮದಾಸರ ಆರಾಧನೆಯನ್ನು ಸಮಾಧಿಸ್ಥಳದಲ್ಲಿ ಭಕ್ತವೃಂದದವರು ವಿಶೇಷವಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. ಶ್ರೀರಾಮದಾಸರ ಭಕ್ತಿ ನಮ್ಮ ಬದುಕಿಗೆ ಮಾರ್ಗದರ್ಶಕವಾಗಲಿ. ಅಂತಹ ಭಕ್ತಿಯನ್ನು ಭಗವಂತ ನಮಗೆ ಕರುಣಿಸಲೆಂದು ಪ್ರಾರ್ಥಿಸೋಣ.

## ಟಿಬೆಟ್‌ನಲ್ಲಿ ಅಖಂಡಾನಂದರು

ಸ್ವಾಮಿ ಅಖಂಡಾನಂದರು ಟಿಬೆಟ್‌ಗೆ ಹೋಗಿದ್ದಾಗ, ಅಲ್ಲಿ ಥುಲಿಂಗ್ ಮಠದಲ್ಲಿ ತಂಗಿದ್ದರು. ಅಲ್ಲಿದ್ದ ಬೌದ್ಧ ಸಂನ್ಯಾಸಿಗಳು (ಲಾಮಾ) ಅಖಂಡಾನಂದರ ದೇಹಲಕ್ಷಣಗಳನ್ನು ಪರೀಕ್ಷಿಸಿ, ಇವರು ಅಖಂಡ ಬ್ರಹ್ಮಚರ್ಯವನ್ನು ಪಾಲಿಸುತ್ತಿರುವ ಸಂನ್ಯಾಸಿ ಎಂದು ಗುರುತಿಸಿದರು. ಅಖಂಡಾನಂದರೊಡನೆ ಇದ್ದ ಶ್ರೀರಾಮಕೃಷ್ಣರ ಭಾವಚಿತ್ರವನ್ನು ನೋಡಿ ಒಬ್ಬ ಲಾಮಾ ಹೇಳಿದರು : "ಇವರು ಯಾರು? ಈ ಕಣ್ಣುಗಳು ಸಾಮಾನ್ಯ ವ್ಯಕ್ತಿಯ ಕಣ್ಣುಗಳಲ್ಲ. ಈ ವ್ಯಕ್ತಿ ಬುದ್ಧನೇ ಆಗಿರಬೇಕು."

ಅಖಂಡಾನಂದರು ಅಲ್ಲಿದ್ದಾಗ ಹದಿನೈದೇ ದಿನಗಳಲ್ಲಿ ಟಿಬೆಟ್ ಭಾಷೆಯನ್ನು ಕಲಿತರು. ಅಲ್ಲಿಯ ಲಾಮಾಗಳ ವಿಲಾಸ ಜೀವನವನ್ನೂ ಅವರ ಧನವ್ಯಾಮೋಹವನ್ನೂ ಕಂಡು ಅಖಂಡಾನಂದರು ಬಡವರ ಪರವಾಗಿ ಅವರಿಗೆ ಹೇಳತೊಡಗಿದರು. ಇದರ ಪರಿಣಾಮವಾಗಿ ಲಾಮಾಗಳು ಅವರನ್ನು ಬಂಧನದಲ್ಲಿರಿಸಿ, ಹಿಂಸಿಸಲಾರಂಭಿಸಿದರು. ಒಬ್ಬ ಲಾಮಾ ಅವರನ್ನು ಕತ್ತಿಯ ಒರೆಯಿಂದ ಹೊಡೆದನು. ಆದರೂ ಅವರು ಬಡವರ ಬಗ್ಗೆ ಸಹಾನುಭೂತಿ ತೋರಿಸುವುದನ್ನು ಬಿಡಲಿಲ್ಲ. ಸುತ್ತಲಿನ ಬಡಜನರು ಅವರನ್ನು ತುಂಬ ಗೌರವಿಸುತ್ತಿದ್ದರು. ಇದನ್ನು ಸಹಿಸಲಾಗದ ಲಾಮಾಗಳು ಅಖಂಡಾನಂದರಿಗೆ, ಇದೇ ರೀತಿ ಬಡವರ ಪರವಾಗಿ ಮಾತನಾಡಿದರೆ ಅವರ ಹಲ್ಲು ಉದುರಿಸುವುದಾಗಿಯೂ ಆಜೀವ ಸೆರೆಯಲ್ಲಿರಿಸುವುದಾಗಿಯೂ ಎಚ್ಚರಿಕೆ ನೀಡಿದರು. ಕೆಲವು ವ್ಯಾಪಾರಿಗಳ ಸಹಾಯದಿಂದ ಅಖಂಡಾನಂದರು ಅಲ್ಲಿಂದ ತಪ್ಪಿಸಿಕೊಂಡು ಬಂದರು.

ಇನ್ನೊಮ್ಮೆ ಸ್ವಾಮಿ ಅಖಂಡಾನಂದರು ಕೈಲಾಸ-ಮಾನಸಸರೋವರದಿಂದ ಹಿಂದಿರುಗಿ ಬರುತ್ತಿರುವಾಗ ಚೆಕ್ರಾ ಎಂಬ ಹಳ್ಳಿಯಲ್ಲಿ ಒಬ್ಬ ಶ್ರೀಮಂತನ ಮನೆಯಲ್ಲಿ ಅತಿಥಿಗಳಾಗಿದ್ದರು. ಅವನು ತುಂಬ ಧಾರ್ಮಿಕ ವ್ಯಕ್ತಿ. ಒಂದು ದಿನ ಆ ಶ್ರೀಮಂತನು ಅಖಂಡಾನಂದರ ಹಾಸಿಗೆಯ ಪಕ್ಕದಲ್ಲಿದ್ದ ಶ್ರೀರಾಮಕೃಷ್ಣರ ಭಾವಚಿತ್ರವನ್ನು ನೋಡಿದನು. ತುಂಬ ಆಕರ್ಷಿತನಾದ ಅವನು ಅದನ್ನು ಎತ್ತಿಕೊಳ್ಳುವುದಕ್ಕೆಂದು ಸ್ಪರ್ಶಿಸಿದ ಕೂಡಲೆ ತನ್ನ ಬಾಹ್ಯಪ್ರಜ್ಞೆಯನ್ನು ಕಳೆದುಕೊಂಡನು. ಪ್ರಜ್ಞೆ ತಿಳಿದಮೇಲೆ ಅವನು ಅಖಂಡಾನಂದರನ್ನು ಕೇಳಿದ : "ನಿಮಗೆ ಈ ಚಿತ್ರ ಎಲ್ಲಿ ಸಿಕ್ಕಿತು? ದಯವಿಟ್ಟು ನನಗಿದನ್ನು ಕೊಡಿ. ನಾನು ಇವರನ್ನು ಪ್ರತಿದಿನ ಪೂಜಿಸುತ್ತೇನೆ. ಇವರು ಖಂಡಿತವಾಗಿ ಬುದ್ಧನೇ. ಇಲ್ಲದಿದ್ದರೆ ಇವರ ಚಿತ್ರವನ್ನು ನಾನು ಮುಟ್ಟಿದ ಕೂಡಲೇ ಇಷ್ಟೊಂದು ಭಾವಪರವಶನಾಗಲು ಹೇಗೆ ಸಾಧ್ಯ? ಇಂತಹ ಮುಖಭಾವ ಸಾಮಾನ್ಯ ವ್ಯಕ್ತಿಯಲ್ಲಿ ಇರಲು ಸಾಧ್ಯವೇ ಇಲ್ಲ."

ಸ್ವಾಮಿ ಅಖಂಡಾನಂದರು ಮೂರು ಬಾರಿ ಟಿಬೆಟಿಗೆ ಭೇಟಿ ಇತ್ತಿದ್ದರು. ಈ ಅವಧಿಯಲ್ಲಿ ಅವರು ಅನುಭವಿಸಿದ ಕಷ್ಟನಷ್ಟಗಳು ಅಪಾರ, ಈ ನಡುವೆ ಅವರು ಪಡೆದ ಅನುಭವಗಳು ಶ್ರೀಮಂತ. ಅವರ ಜೀವನ ರೋಮಾಂಚಕರ ಮತ್ತು ಸ್ವಾರಸ್ಯಕರ ಘಟನೆಗಳಿಂದ ಕೂಡಿದೆ. ಟಿಬೆಟ್ ಭಾಷೆ, ಆಚಾರಗಳು, ಧಾರ್ಮಿಕ ಸಂಸ್ಕೃತಿ ಇತ್ಯಾದಿಗಳಲ್ಲಿ ಅವರಿಗಿದ್ದ ಪ್ರಭುತ್ವವನ್ನು ಗುರುತಿಸಿದ ಬ್ರಿಟಿಷ್ ಸರ್ಕಾರವು ಟಿಬೆಟ್‌ನಲ್ಲಿ ನಿಯೋಗಿಯ (consul) ಹುದ್ದೆಯನ್ನು ನೀಡಿತು. ಆದರೆ ಅಖಂಡಾನಂದರು ಅದನ್ನು ತಿರಸ್ಕರಿಸಿದರು.

**(ಸ್ವಾಮಿ ಚೇತನಾನಂದರಿಂದ ರಚಿತವಾದ *God Lived with Them* ಎಂಬ ಗ್ರಂಥದಿಂದ)**